2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 198/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರುಬೆನ್ ಮೋಸೆಸ್ | ಪಿಡಬ್ಲೂ-2 |
| ತಂದೆಯ ಹೆಸರು | - | ಲೇಟ್ ಸಿ ಎ ರಾಬರ್ಟ್ | ಸಿಡಬ್ಲೂ - 3 |
| ವಯಸ್ಸು | - | 50 ವರ್ಷ | |
| ಉದ್ಯೋಗ | - | ವ್ಯಾಪಾರ | |
| ವಾಸ ಸ್ಥಳ | - | ಗೌರಿಕಾಲುವೆ, ಚಿಕ್ಕಮಗಳೂರು | |

ದಿನಾಂಕಃ 23.09.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ವೀಡಿಯೋ ಕಾನ್ಫರೆನ್ಸ್ ಮುಖಾಂತರ ಹಾಜರಿರುವ ಆರೋಪಿ ಗೊತ್ತು. ನಾನು ಆತನನ್ನು ಘಟನೆ ನಡೆದ ಸಮಯದಲ್ಲಿ ನೋಡಿದ್ದೇನೆ. ಚಾಸಾ.1 ಆರೋಪಿಯ ಸಹೋದರ. ಚಾಸಾ.2 ಗೊತ್ತು. ಅವರು ನಮ್ಮ ಏರಿಯಾದವರು. ಮೃತ ಸುಧಾಳನ್ನು ಘಟನೆಯ ದಿನ ನೋಡಿದ್ದೇನೆ. ಚಿಕ್ಕಮಗಳೂರು, ಗೌರಿಕಾಲುವೆಯಲ್ಲಿರುವ ವಾಟರ್ ಟ್ಯಾಂಕ್ ಹತ್ತಿರ ನಮ್ಮ ಮನೆ ಇದೆ. ನಮ್ಮ ಮನೆಯಿಂದ ಮೂರು ಮನೆಗಳ ನಂತರ ಇರುವ ರವಿ ಎಂಬುವವರಿಗೆ ಸೇರಿದ ಆರ್ ಸಿ ಸಿ ಕಟ್ಟಡವಿದೆ. ಸದರಿ ಕಟ್ಟಡದ ಮೊದಲನೇ ಮಹಡಿಯಲ್ಲಿರುವ ಮನೆಯಲ್ಲಿ ಮೃತ ಸುಧಾರವರು ಬಾಡಿಗೆಗೆ ವಾಸವಾಗಿದ್ದರು.

2. 2021 ನೇ ಇಸವಿಯಲ್ಲಿ ಒಂದು ದಿನ ಸಂಜೆ 7.30 ಗಂಟೆಗೆ ನಾನು ಮನೆಗೆ ಬಂದಾಗ ಸುಧಾರವರು ವಾಸವಿದ್ದ ಕಟ್ಟಡದ ಸುತ್ತ ಜನರು ಸೇರಿದ್ದರು. ಅಲ್ಲಿ ಸೇರಿದ್ದವರು ಕೊಲೆಯಾಗಿದೆ ಎಂದು ಮಾತನಾಡುತ್ತಿದ್ದರು. ಆಗ ಅಲ್ಲಿಗೆ ಬಸವನಹಳ್ಳಿ ಪೊಲೀಸರು ಬಂದಿದ್ದರು. ನಂತರ ನಾನು ಅಲ್ಲಿಗೆ ಹೋಗಿ ನೋಡಿದೆನು. ಸುಧಾರವರ ಮನೆಯ ಬಾಗಿಲಿನ entrance ನಲ್ಲಿಯೇ ಸುಧಾರವರ ಮೃತ ದೇಹ ರಕ್ತದ ಮಡುವಿನಲ್ಲಿ ಬಿದ್ದಿತ್ತು, ಆಕೆಯ ಕೂದಲು ಕೆದರಿತ್ತು. ಆಗ ನಾನು ಮತ್ತು ಚಾಸಾ.2 ರಾಜೇಶ್ ಗೌಡ ರವರು ಅವರ ಮನೆಯ ಒಳಗೆ ಅದನ್ನು ನೋಡಿದ್ದೇವೆ. ಅಲ್ಲಿ ಪೊಲೀಸರು ಪರಿಶೀಲನೆ ಮಾಡಿದರು. ಆಗ ಅಲ್ಲಿ ಮೃತ ಸುಧಾರವರ ಇಬ್ಬರು ಗಂಡು ಮಕ್ಕಳು ಇದ್ದರು. ಆರೋಪಿ ಮನೆಯ ಒಂದು ಕಡೆ ಕುಳಿತಿದ್ದನು. ಅಲ್ಲಿ ಪೊಲೀಸರು ನನ್ನ ಮತ್ತು ಚಾಸಾ.2 ರವರ ಸಮಕ್ಷಮ ಮಹಜರ್ ಮಾಡಿಕೊಂಡರು. ನೆಲದ ಮೇಲೆ ಮತ್ತು ಗೋಡೆಯ ಮೇಲೆ ರಕ್ತ ಚೆಲ್ಲಿತ್ತು. ಪೊಲೀಸರು ಅದನ್ನು ಪರಿಶೀಲನೆ ಮಾಡಿ, ಅಳತೆ ಮಾಡಿ, ಮಹಜರ್ ಮಾಡಿಕೊಂಡು ನನ್ನ ಸಹಿಯನ್ನು ಪಡೆದುಕೊಂಡರು. ಸಂಜೆ 7.30 ಗಂಟೆಯಿಂದ 8.00 ಗಂಟೆಯವರೆಗೆ ಪೊಲೀಸರು ಮಹಜರನ್ನು ಮಾಡಿಕೊಂಡಿದ್ದಾರೆ. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದಿನಾಂಕ 23.09.2021 ರಂದು ಜರುಗಿಸಲಾದ ಪಂಚನಾಮೆ ಮತ್ತು

ಸದರಿ ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ನೀಡಿದ ನೋಟೀಸಿನಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ನೋಟೀಸನ್ನು ನಿಪಿ.11 ಮತ್ತು ಮಹಜರನ್ನು ನಿಪಿ.12 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.11(ಎ) ಮತ್ತು ನಿಪಿ.12(ಎ) ಎಂದು ಗುರುತಿಸಲಾಯಿತು.

3. ಸಾಕ್ಷಿಯು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿರುವ ಫೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಸದರಿ ಫೋಟೋದಲ್ಲಿ ತನ್ನ ಜೊತೆ ಚಾಸಾ.2 ರಾಜೇಶ್ ಗೌಡರವರು ಇರುವುದಾಗಿ ನುಡಿದು ಅದನ್ನು ಮಹಜರ್ ಸಮಯದಲ್ಲಿ ಪೊಲೀಸರು ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ.  ಸದರಿ ಫೋಟೋದಲ್ಲಿ ಮತ್ತು ಈಗಾಗಲೇ ನಿಪಿ.4 ರಿಂದ 6 ಫೋಟೋಗಳಲ್ಲಿ ಆ ದಿನ ಸುಧಾರವರ ಮನೆಯ ಬಾಗಿಲಿನ entrance ನಲ್ಲಿ ಸುಧಾರವರ ಮೃತ ದೇಹ ರಕ್ತದ ಮಡುವಿನಲ್ಲಿ ಬಿದ್ದಿರುವುದು ಮತ್ತು ನೆಲ ಮತ್ತು ಗೋಡೆಯಲ್ಲಿ ರಕ್ತದ ಕಲೆಗಳು ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ.

4. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ. ಸಾಕ್ಷಿಯ ಸಮಕ್ಷಮ ವಶಪಡಿಸಿಕೊಳ್ಳಲಾಯಿತು ಎಂದು ಹೇಳಲಾದ ಮು.ಮಾ.2 ಮತ್ತು 3 ರ ಮೇಲೆ ಅಂಟಿಸಲಾಗಿರುವ ಚೀಟಿಗಳಲ್ಲಿರುವ ತನ್ನ

ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.2(ಎ) ಮತ್ತು ಮು.ಮಾ.3(ಎ) ಎಂದು ಗುರುತಿಸಲಾಯಿತು.

5. ಸಾಕ್ಷಿಯ ಸಮಕ್ಷಮ ವಶಪಡಿಸಿಕೊಳ್ಳಲಾಯಿತು ಎಂದು ಹೇಳಲಾದ ರಕ್ತದ ಮಾದರಿ ಸಂಗ್ರಹಿಸಿರುವ ಎರಡು ear buds ಇವೆ ಎಂದು ಹೇಳಲಾದ ಒಂದು ಸೀಲಾಗಿರುವ ಲಕೋಟೆಯ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ಸಹ ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಗಳನ್ನು ಪೊಲೀಸರು ನಿಪಿ.12 ರಂತೆ ಮಹಜರನ್ನು ಮಾಡುವ ಸಮಯಕ್ಕೆ ಮಾಡಿದ್ದೇನೆ. ಆದರೆ ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ. ಸುಧಾರವರನ್ನು ಯಾರು, ಹೇಗೆ ಮತ್ತು ಯಾವ ಕಾರಣಕ್ಕೆ ಕೊಲೆ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

6. ನಿಪಿ.12 ರಂತೆ ಪೊಲೀಸರು ನಿಮ್ಮ ಮತ್ತು ಚಾಸಾ.2 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸುವ ಸಮಯದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಬಿದ್ದಿದ್ದ ರಕ್ತದ ಮಾದರಿಯನ್ನು ಎರಡು ear buds ನಲ್ಲಿ ಸಂಗ್ರಹಿಸಿಕೊಂಡು ಅವುಗಳನ್ನು ಒಂದು

ಲಕೋಟೆಯಲ್ಲಿ ಹಾಕಿ, ಸೀಲು ಮಾಡಿ ಅಮಾನತುಪಡಿಸಿಕೊಂಡು, ಅದರ ಮೇಲೆ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

7. ಕೃತ್ಯ ನಡೆದ ಮನೆಯ ಹಾಲಿನ ಮತ್ತೊಂದು ಮೂಲೆಯಲ್ಲಿ ಮು.ಮಾ.2 ಮತ್ತು 3 ಎಂದು ಗುರುತಿಸಲ್ಪಟ್ಟಿರುವ ಜೀನ್ಸ್ ಪ್ಯಾಂಟು ಮತ್ತು ತುಂಬು ತೋಳಿನ ಚೆಕ್ಸ್ ಶರ್ಟು ಕಂಡು ಬಂದಿದ್ದು, ಅವುಗಳಿಗೆ ರಕ್ತದ ಕಲೆಗಳಾಗಿದ್ದು ಅವುಗಳನ್ನು ತನಿಖಾಧಿಕಾರಿಗಳು ಸದರಿ ಪ್ಯಾಂಟು ಮತ್ತು ಶರ್ಟನ್ನು ಆರೋಪಿ ಕೊಲೆ ಮಾಡಿದ ನಂತರ ಅವುಗಳನ್ನು ಬಿಚ್ಚಿ ಅಲ್ಲಿ ಇಟ್ಟಿರುವುದಾಗಿ ತಮಗೆ ತಿಳಿಸಿರುವುದಾಗಿ ಹೇಳಿ ಅವುಗಳನ್ನು ನಮ್ಮ ಸಮಕ್ಷಮ ಅಮಾನತುಪಡಿಸಿಕೊಂಡು ಪ್ರತ್ಯೇಕ ಬಿಳಿಯ ಬಟ್ಟೆಯ ಚೀಲಗಳಲ್ಲಿ ಹಾಕಿ, ಹೊಲೆದು, P ಎಂಬ ಅಕ್ಷರದಿಂದ ಸೀಲು ಮಾಡಿ ಅವುಗಳ ಮೇಲೆ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿದ್ದಾರೆ ಎಂದರೆ ಸರಿಯಲ್ಲ.

8. ದಿನಾಂಕ 07.10.2021 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ವಿಚಾರಿಸಿದ್ದಾರೆ ಎಂದರೆ ಸರಿ. ದಿನಾಂಕ 23.09.2021 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನಾನು ನಮ್ಮ ಮನೆಯಲ್ಲಿದ್ದಾಗ ಹೊರಗೆ ಜೋರಾಗಿ ಅಳುವ ಶಬ್ದ ಕೇಳಿಸಿದ್ದರಿಂದ ನಾನು ಹೊರಗೆ ಹೋಗಿ ನೋಡಿದಾಗ ಚಾಸಾ.1 ಸಂತೋಷ ಜೋರಾಗಿ ಅಳುತ್ತಾ ಕೆಳಗೆ ಇಳಿದು

ಬಂದನು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಮತ್ತು ಅಲ್ಲಿಯೇ ಇದ್ದ ಚಾಸಾ.12 ಭೋಜರಾಜ ಮತ್ತು ಚಾಸಾ.13 ರವಿ ರವರು ಗಾಬರಿಯಿಂದ ಸಂತೋಷನನ್ನು ಏನಾಯಿತು ಎಂದು ಕೇಳಿದೆವು ಎಂದರೆ ಸರಿಯಲ್ಲ. ಅದಕ್ಕೆ ಸಂತೋಷ ಅಳುತ್ತಾ ದುಷ್ಯಂತ್ ಅವರ ತಾಯಿಯನ್ನು ಕೊಲೆ ಮಾಡಿದ್ದಾನೆ ಎಂದು ಹೇಳಿದನು ಎಂದರೆ ಸರಿಯಲ್ಲ. ಆಗ ನಾನು, ಚಾಸಾ.12 ಮತ್ತು ಚಾಸಾ.13 ರವರು ಹೋಗಿ ನೋಡಿದಾಗ ಸುಧಾರವರು ಅವರ ಮನೆಯ ಒಳಭಾಗದಲ್ಲಿ ಬಾಗಿಲ ಹತ್ತಿರ ರಕ್ತದ ಮಡುವಿನಲ್ಲಿ ಬಿದ್ದಿದ್ದರು ಎಂದರೆ ಸರಿ. ಆಗ ತಕ್ಷಣ ನಾನು ಬಸವನಹಳ್ಳಿ ಪೊಲೀಸ್ ಠಾಣೆಯ ಪಿ ಎಸ್ ಐ ಕಿರಣ್ ಕುಮಾರ್ ರವರಿಗೆ ಫೋನ್ ಮಾಡಿ ತಿಳಿಸಿದ್ದೇನೆ ಎಂದರೆ ಸರಿ. ಸದರಿ ಪಿ ಎಸ್ ಐ ರವರು ಕೂಡಲೇ ಸ್ಥಳಕ್ಕೆ ಬಂದು ಸುಧಾರವರ ಮನೆಯಲ್ಲಿದ್ದ ಅವರ ಮಕ್ಕಳಾದ ದುಷ್ಯಂತ್ ಮತ್ತು ಸಂತೋಷನನ್ನು ವಿಚಾರಿಸಿದರು ಎಂದರೆ ಸರಿಯಲ್ಲ. ಆಗ ಸಂತೋಷನು ಪಿ ಎಸ್ ಐ ರವರಿಗೆ ಆತ, ಆತನ ತಾಯಿ ಮತ್ತು ಅಣ್ಣ ಆ ದಿನ ಬೆಳಿಗ್ಗೆ 8.30 ಗಂಟೆಗೆ ದೇವಸ್ಥಾನಕ್ಕೆ ಹೋಗಿ 11.30 ಗಂಟೆಗೆ ಮನೆಗೆ ವಾಪಾಸ್ಸು ಬಂದಿದ್ದಾಗಿ ನಂತರ ಆತ ತನ್ನ ಸ್ನೇಹಿತ ಸಂಜಯ್ ರವರ ಪಿಜಿ ಮಾಲೀಕರಾದ ಮಮತಾರವರಿಗೆ ಹುಷಾರಿಲ್ಲದ ಕಾರಣ ಆಕೆಯನ್ನು ನೋಡಲು ಹೋಗಿದ್ದಾಗಿ ಮತ್ತು ಆ ಸಮಯದಲ್ಲಿ ಆರೋಪಿ ಮತ್ತು ಆತನ ತಾಯಿ ಮನೆಯಲ್ಲಿ

ಇದ್ದಿದ್ದಾಗಿ ತಿಳಿಸಿದನು ಎಂದರೆ ಸರಿಯಲ್ಲ.

9. ನಂತರ ಪಿ ಎಸ್ ಐ ರವರು ಆರೋಪಿಯನ್ನು ವಿಚಾರಿಸಿದಾಗ ಆತನು ತನ್ನ ತಾಯಿ ಖರ್ಚಿಗೆ ಹಣವನ್ನು ಕೊಡಲಿಲ್ಲವೆಂದು, ಆತನ ತಾಯಿಯನ್ನು ಗೋಡೆಗೆ ಗುದ್ದಿಸಿ, ಕಾಲಿನಿಂದ ತುಳಿದು ಸಾಯಿಸಿದ್ದಾಗಿ ಹೇಳಿದನು ಎಂದರೆ ಸರಿಯಲ್ಲ. ಕೂಡಲೇ ಪಿ ಎಸ್ ಐ ರವರು ದುಷ್ಯಂತ್ ನನ್ನು ವಶಕ್ಕೆ ಪಡೆದುಕೊಂಡು ಸಂತೋಷನನ್ನು ಠಾಣೆಗೆ ಬಂದು ದೂರು ಕೊಡಲು ತಿಳಿಸಿ ಸ್ಥಳದಲ್ಲಿ ಸಿಬ್ಬಂದಿಯನ್ನು ಇರಿಸಿ ದುಷ್ಯಂತನನ್ನು ಠಾಣೆಗೆ ಕರೆದುಕೊಂಡು ಹೋದರು ಎಂದರೆ ಸರಿ. ಈ ವಿಚಾರಗಳನ್ನು ತಿಳಿಸಿ ದಿನಾಂಕ 07.10.2021 ರಂದು ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ.13 ಎಂದು ಗುರುತಿಸಲಾಯಿತು.

10. ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ಪೊಲೀಸರಿಗೆ ನಿಪಿ.13 ರಂತೆ ಹೇಳಿಕೆಯನ್ನು ನೀಡಿದ್ದು, ಪೊಲೀಸರು ನಿಮ್ಮ ಸಮಕ್ಷಮ ಮು.ಮಾ.2 ಮತ್ತು 3 ಮತ್ತು ರಕ್ತದ ಮಾದರಿಗಳನ್ನು ಸಂಗ್ರಹಿಸಿದ್ದರೂ ಸಹ ಆರೋಪಿತನೊಂದಿಗೆ ಶಾಮೀಲಾಗಿ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ ಹೆಚ್ ಟಿ ಎಸ್ ಕೆ ಆರೋಪಿ ಪರ ವಕೀಲರಿಂದಃ</u>

11. ಆರೋಪಿ, ಪಿರ್ಯಾದಿ ಮತ್ತು ಮೃತಳನ್ನು ಘಟನೆಯ ದಿನವೇ ಮೊದಲ ಬಾರಿಗೆ ನೋಡಿದ್ದೇನೆ. ಅವರ ಮನೆಯಲ್ಲಿ ಆಸ್ತಿ ವಿಚಾರಕ್ಕೆ ಗಲಾಟೆಯಾಗುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನೀವು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿ ಕೆಲವು ಸಹಿಗಳನ್ನು ಕೃತ್ಯ ನಡೆದ ಸ್ಥಳದಲ್ಲಿ ಮಾಡಿದ್ದೇನೆ ಮತ್ತು ಕೆಲವು ಸಹಿಗಳನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ ಎನ್ನುತ್ತಾರೆ. ನಾನು ಸಹಿ ಮಾಡಿರುವ ದಾಖಲೆಗಳಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.